Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
ವಿಶೇಷ ಸಂಚಿಕೆ

भाग—IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली सोमवार, नोव्हेंबर 10, 1986 | कार्तिक 19, 1908 (शक) | खण्ड—4 |
| No. 1 | New Delhi Monday, November 10, 1986 | Karthika 19, 1908 (Saka) | Vol. 4 |
| ಸಂಖ್ಯೆ ೧ | ನವದೆಹಲಿ ಸೋಮವಾರ, ನವೆಂಬರ್ ೧೦, ೧೯೮೬ | ಕಾರ್ತೀಕ ೧೯, ೧೯೦೮ (ಶಕ) | ಸಂಪುಟ ೪ |


## MINISTRY OF LAW AND JUSTICE
### (Legislative Department)

New Delhi, September 8, 1986/Bhadrapada 17, 1908 (Sakha)

The translations in Kannada of the following namely—(1) The Public Servants (Inquiries) Act, 1850 (2) The Caste Disabilities Removal Act, 1850 (3) The Dramatic Performances Act, 1876 (4) The Epidemic Diseases Act, 1897 (5) The Police (Incitement to Disaffection) Act, 1922 (6) The Hindu Inheritance (Removal of Disabilities) Act, 1928 (7) The Hindu Gains of Learning Act, 1930 (8) The Arya Marriage Validation Act, 1937 (9) The Employees Liability Act, 1938 (10) The Weekly Holidays Act, 1942 (11) The Foreigners Act, 1946 (12) The Representation of the People (Miscellaneous Provisions) Act, 1956 (13) The Standards of Weights and Measures Act, 1976 (14) The National Library of India Act, 1976—are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಲೋಕ ನೌಕರರ (ವಿಚಾರಣಾ) ಅಧಿನಿಯಮ, ೧೮೫೦ (೨) ಜಾತಿ ಅಸಮರ್ಥತೆಗಳನ್ನು ತೆಗೆದುಹಾಕುವ ಅಧಿನಿಯಮ, ೧೮೫೦ (೩) ನಾಟಕ ಪ್ರದರ್ಶನ ಅಧಿನಿಯಮ, ೧೮೭೬ (೪) ಸಾಂಕ್ರಾಮಿಕ ರೋಗಗಳ ಅಧಿನಿಯಮ, ೧೮೯೭ (೫) ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, ೧೯೨೨ (೬) ಹಿಂದೂವಾರಸು (ಅಸಮರ್ಥತಾ ನಿವಾರಣಾ) ಅಧಿನಿಯಮ, ೧೯೨೮ (೭) ಹಿಂದೂ ವಿದ್ಯಾರ್ಜನ ಅಧಿನಿಯಮ, ೧೯೩೦ (೮) ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, ೧೯೩೭ (೯) ನಿಯೋಜಕ ಹೊಣೆಗಾರಿಕೆ ಅಧಿನಿಯಮ, ೧೯೩೮ (೧೦) ವಾರದ ರಜಾ ದಿನ ಅಧಿನಿಯಮ, ೧೯೪೨ (೧೧) ವಿದೇಶಿಯರ ಅಧಿನಿಯಮ, ೧೯೪೬ (೧೨) ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, ೧೯೫೬ (೧೩) ತೂಕ ಮತ್ತು ಅಳತೆ ಮಾನಕ ಅಧಿನಿಯಮ, ೧೯೭೬, (೧೪) ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, ೧೯೭೬.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ, (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

## ಸಾಂಕ್ರಾಮಿಕ ರೋಗಗಳ ಅಧಿನಿಯಮ, 1897

## (1897ರ ಸಂಖ್ಯೆ 3)

[4ನೇ ಫೆಬ್ರವರಿ, 1897.]

ಅಪಾಯಕಾರಿ ಸಾಂಕ್ರಾಮಿಕ ರೋಗಗಳು ಹರಡುವುದನ್ನು ಉತ್ತಮ ರೀತಿಯಲ್ಲಿ ನಿವಾರಿಸುವ ಸಲುವಾಗಿ ಉಪಬಂಧಿಸುವ ಅಧಿನಿಯಮ.

ಅಪಾಯಕಾರಿ ಸಾಂಕ್ರಾಮಿಕ ರೋಗಗಳು ಹರಡುವುದನ್ನು ಉತ್ತಮ ರೀತಿಯಲ್ಲಿ ನಿವಾರಿಸುವ ಸಲುವಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ, ಇದನ್ನು ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ಸಾಂಕ್ರಾಮಿಕ ರೋಗಗಳ ಅಧಿನಿಯಮ, 1897 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ಅನ್ವಯಿಸುತ್ತದೆ.

**1ಎ. ಪರಿಭಾಷೆಗಳು.–** ಇದರಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಹಿಂಸಾಕೃತ್ಯ"ವು ಸಾಂಕ್ರಾಮಿಕ ರೋಗಗಳ ಸಮಯದಲ್ಲಿ ಸೇವೆ ಸಲ್ಲಿಸುತ್ತಿರುವ ಆರೋಗ್ಯ ಸೇವಾ ಸಿಬ್ಬಂದಿಯ ವಿರುದ್ಧ ಯಾರೇ ವ್ಯಕ್ತಿ,–

(i) ಅಂಥ ಆರೋಗ್ಯ ಸೇವಾ ಸಿಬ್ಬಂದಿಗಳ ಜೀವನ ಅಥವಾ ಕೆಲಸ ಮಾಡುವ ಪರಿಸ್ಥಿತಿಗಳ ಮೇಲೆ ಪ್ರಭಾವ ಬೀರುವ ಮತ್ತು ತನ್ನ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ಅವನನ್ನು ತಡೆಯುವ ಕಿರುಕುಳವನ್ನು;

(ii) ಚಿಕಿತ್ಸಾ ಕಾರ್ಯಸಂಸ್ಥೆಯ ಆವರಣದೊಳಗೆ ಅಥವಾ ಬೇರೆಕಡೆ ಅಂಥ ಆರೋಗ್ಯ ಸೇವಾ ಸಿಬ್ಬಂದಿ ಜೀವಕ್ಕೆ ಹಾನಿ, ಗಾಯ, ನೋವು, ಬೆದರಿಕೆ ಅಥವಾ ಅಪಾಯವನ್ನು;

(iii) ಚಿಕಿತ್ಸಾ ಕಾರ್ಯಸಂಸ್ಥೆಯ ಆವರಣದೊಳಗೆ ಅಥವಾ ಬೇರೆಕಡೆ ಅಂಥ ಆರೋಗ್ಯ ಸೇವಾ ಸಿಬ್ಬಂದಿಗೆ ಅವರ ಕರ್ತವ್ಯ ನಿರ್ವಹಣೆಗೆ ಅಡಚಣೆ ಅಥವಾ ಅಡ್ಡಿಯನ್ನು; ಅಥವಾ

(iv) ಅಂಥ ಆರೋಗ್ಯ ಸೇವಾ ಸಿಬ್ಬಂದಿಗಳ ಸುಪರ್ದಿನಲ್ಲಿರುವ ಅಥವಾ ಅವರಿಗೆ ಸಂಬಂಧಿಸಿದ ಯಾವುದೇ ಸ್ವತ್ತು ಅಥವಾ ದಾಖಲೆಗಳಿಗೆ ಹಾನಿ ಅಥವಾ ನಷ್ಟವನ್ನು

– ಉಂಟುಮಾಡುವ ಅಥವಾ ಉಂಟುಮಾಡಬಹುದಾದ ರೀತಿಯಲ್ಲಿ ಎಸಗಿದ ಯಾವುದೇ ಕೃತ್ಯಗಳನ್ನು ಒಳಗೊಳ್ಳುತ್ತದೆ;

(ಬಿ) "ಆರೋಗ್ಯ ಸೇವಾ ಸಿಬ್ಬಂದಿ" ಎಂದರೆ, ಸಾಂಕ್ರಾಮಿಕ ರೋಗಗಳಿಗೆ ಸಂಬಂಧಪಟ್ಟ ಹೊಣೆಗಾರಿಕೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿಯು ತನ್ನ ಕರ್ತವ್ಯಗಳನ್ನು ನಿರ್ವಹಿಸುವ ಸಂದರ್ಭದಲ್ಲಿ, ರೋಗಪೀಡಿತ ವ್ಯಕ್ತಿಗಳೊಂದಿಗೆ ನೇರ ಸಂಪರ್ಕಕ್ಕೆ ಬರಬಹುದಾದ ಮತ್ತು ಆ ಮೂಲಕ ಅಂಥ ಕಾಯಿಲೆಗೆ ತುತ್ತಾಗುವ ಅಪಾಯವಿರುವ ವ್ಯಕ್ತಿ ಮತ್ತು ಇದು,–

(i) ವೈದ್ಯರು, ನರ್ಸ್, ಅರೆವೈದ್ಯಕೀಯ ಕಾರ್ಯಕರ್ತರು ಮತ್ತು ಸಮುದಾಯ ಆರೋಗ್ಯ ಕಾರ್ಯಕರ್ತರಂಥ ಯಾವುದೇ ಸಾರ್ವಜನಿಕ ಮತ್ತು ವೈದ್ಯಕೀಯ ಆರೋಗ್ಯ ಸೇವೆಯನ್ನು ಒದಗಿಸುವವರು;

(ii) ರೋಗದ ಉಲ್ಬಣ ಅಥವಾ ಅದರ ಹರಡುವಿಕೆಯನ್ನು ತಡೆಗಟ್ಟುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುವ ಸಲುವಾಗಿ ಅಧಿನಿಯಮದ ಅಡಿಯಲ್ಲಿ ಅಧಿಕಾರ ಹೊಂದಿರುವ ಯಾರೇ ಇತರ ವ್ಯಕ್ತಿ; ಮತ್ತು

(iii) ರಾಜ್ಯ ಸರ್ಕಾರವು, ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಘೋಷಿಸಲಾದಂಥ ಯಾರೇ ವ್ಯಕ್ತಿಯನ್ನು

– ಒಳಗೊಳ್ಳುತ್ತದೆ;

(ಸಿ) "ಸ್ವತ್ತು" ಇದು,–

(i) ಚಿಕಿತ್ಸಾ ಕಾರ್ಯಸಂಸ್ಥೆಗಳ (ನೋಂದಣಿ ಮತ್ತು ವಿನಿಯಮನ) ಅಧಿನಿಯಮ, 2010 (2010ರ 23) ರಲ್ಲಿ ಪರಿಭಾಷಿಸಲಾದ ಚಿಕಿತ್ಸಾ ಕಾರ್ಯಸಂಸ್ಥೆ;

(ii) ಸಾಂಕ್ರಾಮಿಕ ರೋಗದ ಸಮಯದಲ್ಲಿ ರೋಗಿಗಳನ್ನು ಕ್ವಾರೆಂಟೈನ್ ಮತ್ತು ಐಸೋಲೇಷನ್‌ಗಾಗಿ ಗುರುತಿಸಲಾದ ಯಾವುದೇ ಸೌಲಭ್ಯ;

(iii) ಸಂಚಾರಿ ವೈದ್ಯಕೀಯ ಘಟಕ; ಮತ್ತು

(iv) ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದಂತೆ ಆರೋಗ್ಯ ಸೇವಾ ಸಿಬ್ಬಂದಿಯು ನೇರ ಹಿತಾಸಕ್ತಿ ಹೊಂದಿರುವ ಯಾವುದೇ ಇತರೆ ಸ್ವತ್ತನ್ನು

– ಒಳಗೊಳ್ಳುತ್ತದೆ;

(ಡಿ) ಇದರಲ್ಲಿ ಉಪಯೋಗಿಸಲಾಗಿರುವ ಮತ್ತು ಪರಿಭಾಷಿಸದೇ ಇರುವ, ಆದರೆ ಭಾರತೀಯ ಬಂದರುಗಳ ಅಧಿನಿಯಮ, 1908 (1908ರ 15), ವಿಮಾನಯಾನ ಅಧಿನಿಯಮ, 1934 (1934ರ 22) ಅಥವಾ ಭಾರತ ಭೂ ಬಂದರುಗಳ ಪ್ರಾಧಿಕಾರ ಅಧಿನಿಯಮ, 2010 (2010ರ 31)ಗಳಲ್ಲಿ ಬರುವ ಪದಗಳು ಮತ್ತು ಪದಾವಳಿಗಳು ಈ ಅಧಿನಿಯಮದಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**2. ಅಪಾಯಕಾರಿ ಸಾಂಕ್ರಾಮಿಕ ರೋಗಗಳ ಬಗ್ಗೆ ವಿಶೇಷ ಕ್ರಮಗಳನ್ನು ಕೈಗೊಳ್ಳುವ ಮತ್ತು ವಿನಿಯಮನಗಳನ್ನು ಗೊತ್ತುಪಡಿಸುವ ಅಧಿಕಾರ.–** (1) ಯಾವುದೇ ಸಮಯದಲ್ಲಿ ರಾಜ್ಯದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ಅಪಾಯಕಾರಿ ಸಾಂಕ್ರಾಮಿಕ ರೋಗವು ತಲೆದೋರಿದೆಯೆಂದು ಅಥವಾ ತಲೆದೋರುವ ಭಯವಿದೆಯೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ರಾಜ್ಯ ಸರ್ಕಾರವು, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಸಾಮಾನ್ಯ ವಿಧಿಯ ಉಪಬಂಧಗಳು ಆ ಉದ್ದೇಶಕ್ಕೆ ಸಾಕಾಗುವಷ್ಟು ಇಲ್ಲವೆಂದು ಅಭಿಪ್ರಾಯಪಟ್ಟರೆ, ಅದು, ಅಂಥ ರೋಗದ ತಲೆದೋರುವಿಕೆಯನ್ನು ಅಥವಾ ಅದರ ಹರಡುವಿಕೆಯನ್ನು ನಿವಾರಿಸಲು ಅವಶ್ಯವೆಂದು ಭಾವಿಸತಕ್ಕ ಕ್ರಮಗಳನ್ನು ಕೈಗೊಳ್ಳಬಹುದು ಅಥವಾ ಅಂಥ ಕ್ರಮಗಳನ್ನು ಕೈಗೊಳ್ಳುವಂತೆ ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಬಹುದು ಅಥವಾ ಶಕ್ತಗೊಳಿಸಬಹುದು ಮತ್ತು ಸಾರ್ವಜನಿಕರು ಅಥವಾ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗವು ಪಾಲಿಸಬೇಕಾದಂಥ ತಾತ್ಕಾಲಿಕ ವಿನಿಯಮಗಳನ್ನು ಸಾರ್ವತ್ರಿಕ ನೋಟೀಸಿನ ಮೂಲಕ ಗೊತ್ತುಪಡಿಸಬಹುದು ಮತ್ತು ವಹಿಸಲಾದ ಯಾವುದೇ ವೆಚ್ಚಗಳನ್ನು (ಪರಿಹಾರ ಯಾವುದಾದರೂ ಇದ್ದರೆ ಅದೂ ಸೇರಿದಂತೆ) ಯಾವುದೇ ವಿಧಾನದಲ್ಲಿ ಮತ್ತು ಯಾರು ವಹಿಸತಕ್ಕದ್ದೆಂಬುದನ್ನು ನಿರ್ಧರಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವುಂಟಾಗದಂತೆ ರಾಜ್ಯ ಸರ್ಕಾರವು,–

(ಎ) [ * * * ]

(ಬಿ) ರೈಲಿನಲ್ಲಿ ಅಥವಾ ಅನ್ಯಥಾ ಪ್ರಯಾಣ ಮಾಡುವ ವ್ಯಕ್ತಿಗಳ ಪರಿಶೀಲನೆ ಮತ್ತು ಅಂಥ ಯಾವುದೇ ರೋಗವು ಅಂಟಿರುವುದೆಂದು ಪರಿಶೀಲನಾಧಿಕಾರಿಯು ಸಂಶಯಪಡುವಂಥ

ವ್ಯಕ್ತಿಗಳನ್ನು ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿ ಇರಿಸುವುದು, ತಾತ್ಕಾಲಿಕವಾಗಿ ವಸತಿ ಸೌಕರ್ಯ ಕಲ್ಪಿಸುವುದು ಅಥವಾ ಬೇರೆ ಸೌಕರ್ಯವನ್ನು ಕಲ್ಪಿಸುವುದು ಇವೇ ಮುಂತಾದವುಗಳ ಬಗ್ಗೆ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ವಿನಿಯಮಗಳನ್ನು ಗೊತ್ತುಪಡಿಸಬಹುದು.

**2ಎ. ಕೇಂದ್ರ ಸರ್ಕಾರದ ಅಧಿಕಾರಗಳು.–** ಭಾರತದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಅಪಾಯಕಾರಿ ಸಾಂಕ್ರಾಮಿಕ ರೋಗವು ತಲೆದೋರಿದೆಯೆಂದು ಅಥವಾ ತಲೆದೋರುವ ಭಯವಿದೆಯೆಂದು ಮತ್ತು ಅಂಥ ರೋಗಗಳ ತಲೆದೋರುವಿಕೆ ಅಥವಾ ಹರಡುವಿಕೆಯನ್ನು ನಿವಾರಿಸಲು ತತ್ಕಾಲದಲ್ಲಿ ಜಾರಿಯಲ್ಲಿರುವ ವಿಧಿಯ ಸಾಮಾನ್ಯ ಉಪಬಂಧಗಳು ಸಾಕಾಗುವಷ್ಟು ಇಲ್ಲವೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ಅದು, ಈ ಅಧಿನಿಯಮವು ಅನ್ವಯವಾಗುವ ಯಾವುದೇ ರಾಜ್ಯಕ್ಷೇತ್ರಗಳಲ್ಲಿನ ಯಾವುದೇ ಬಂದರಿನಿಂದ ಹೊರಡುವ ಅಥವಾ ಬಂದರಿಗೆ ಬರುವ ಯಾವುದೇ ಹಡಗು ಅಥವಾ ನೌಕೆಯ ಪರಿಶೀಲನೆಗಾಗಿ ಮತ್ತು ಅದನ್ನು ಅಥವಾ ಅವಶ್ಯಕವಾಗಬಹುದಾದಂತೆ ಅದರಲ್ಲಿ ಪ್ರಯಾಣ ಮಾಡಲು ಉದ್ದೇಶಿಸಿರುವ ಅಥವಾ ಅದರಲ್ಲಿ ಬಂದಿಳಿಯುವ ಯಾರೇ ವ್ಯಕ್ತಿಯನ್ನು ತಡೆಹಿಡಿದಿರಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ವಿನಿಯಮನಗಳನ್ನು ಗೊತ್ತುಪಡಿಸಬಹುದು.

**2ಬಿ. ಚಿಕಿತ್ಸಾ ಕಾರ್ಯಸಂಸ್ಥೆ ಸಿಬ್ಬಂದಿ ಮೇಲಿನ ಹಿಂಸಾಕೃತ್ಯ ಮತ್ತು ಸ್ವತ್ತಿಗೆ ಹಾನಿ ಉಂಟುಮಾಡುವುದರ ಮೇಲೆ ನಿಷೇಧ.–** (1) ಸಾಂಕ್ರಾಮಿಕ ರೋಗದ ಸಮಯದಲ್ಲಿ ಯಾರೇ ವ್ಯಕ್ತಿ ಆರೋಗ್ಯ ಸೇವಾ ಸಿಬ್ಬಂದಿಯ ವಿರುದ್ಧ ಯಾವುದೇ ಹಿಂಸಾಕೃತ್ಯದಲ್ಲಿ ತೊಡಗತಕ್ಕದ್ದಲ್ಲ ಅಥವಾ ಯಾವುದೇ ಸ್ವತ್ತಿಗೆ ಹಾನಿ ಅಥವಾ ನಷ್ಟವನ್ನು ಉಂಟುಮಾಡತಕ್ಕದ್ದಲ್ಲ.

**3. ದಂಡನೆ.–** ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ವಿನಿಯಮ ಅಥವಾ ಆದೇಶವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಭಾರತ ದಂಡ ಸಂಹಿತೆ (1860ರ 45)ಯ 188ನೇ ಪ್ರಕರಣದ ಮೇರೆಗೆ ದಂಡನೀಯವಾಗುವ ಅಪರಾಧವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು.

(2) ಯಾರೇ ವ್ಯಕ್ತಿಯು,–

(i) ಆರೋಗ್ಯ ಸೇವಾ ಸಿಬ್ಬಂದಿಯ ವಿರುದ್ಧದ ಹಿಂಸಾಕೃತ್ಯವನ್ನು ಎಸಗಿದರೆ ಅಥವಾ ಅದಕ್ಕೆ ಕುಮ್ಮಕ್ಕು ನೀಡಿದರೆ;

(ii) ಯಾವುದೇ ಸ್ವತ್ತಿನ ಹಾನಿ ಅಥವಾ ನಷ್ಟಕ್ಕೆ ಕುಮ್ಮಕ್ಕು ನೀಡಿದರೆ ಅಥವಾ ಅದಕ್ಕೆ ಹಾನಿ ಅಥವಾ ನಷ್ಟ ಉಂಟುಮಾಡಿದರೆ

– ಅಂಥ ವ್ಯಕ್ತಿಯು ಮೂರು ತಿಂಗಳಿಗಿಂತ ಕಡಿಮೆಯಿಲ್ಲದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದ, ಆದರೆ ಎರಡು ಲಕ್ಷಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ಆರೋಗ್ಯ ಸೇವಾ ಸಿಬ್ಬಂದಿಯ ವಿರುದ್ಧ ಹಿಂಸಾಕೃತ್ಯವನ್ನು ಎಸಗುವ ಸಂದರ್ಭದಲ್ಲಿ, ಆತ ಭಾರತ ದಂಡ ಸಂಹಿತೆ (1860ರ 45)ಯ 320ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ ತೀವ್ರ ಗಾಯವನ್ನುಂಟು ಮಾಡಿದರೆ, ಅಂಥ ವ್ಯಕ್ತಿಯು ಆರು ತಿಂಗಳಿಗಿಂತ ಕಡಿಮೆಯಿಲ್ಲದ, ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿಲ್ಲದ, ಆದರೆ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**3ಎ. ಅಪರಾಧಗಳ ಸಂಜ್ಞೇಯತೆ, ತನಿಖೆ ಮತ್ತು ವಿಚಾರಣೆ.–** ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಒಳಗೊಂಡಿದ್ದರೂ,–

(i) 3ನೇ ಪ್ರಕರಣದ (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧವು ಸಂಜ್ಞೇಯವಾಗಿರತಕ್ಕದ್ದು ಮತ್ತು ಜಾಮೀನು ರಹಿತವಾಗಿರತಕ್ಕದ್ದು;

(ii) 3ನೇ ಪ್ರಕರಣದ (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ ಅಡಿಯಲ್ಲಿ ದಾಖಲಾದ ಯಾವುದೇ ಪ್ರಕರಣವನ್ನು ಇನ್ಸ್‌ಪೆಕ್ಟರ್ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಪೊಲೀಸ್ ಅಧಿಕಾರಿಯು ತನಿಖೆ ನಡೆಸತಕ್ಕದ್ದು;

(iii) 3ನೇ ಪ್ರಕರಣದ (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ ಅಡಿಯಲ್ಲಿ ಪ್ರಕರಣದ ತನಿಖೆಯನ್ನು ಪ್ರಥಮ ವರ್ತಮಾನ ವರದಿ ದಾಖಲಾದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು;

(iv) 3ನೇ ಪ್ರಕರಣದ (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದ ಅಡಿಯಲ್ಲಿ ಪ್ರಕರಣದ ಪ್ರತಿಯೊಂದು ತನಿಖೆ ಅಥವಾ ವಿಚಾರಣೆಯಲ್ಲಿ ಸಾಧ್ಯವಾದಷ್ಟು ಶೀಘ್ರವಾಗಿ ವ್ಯವಹರಣೆಗಳನ್ನು ನಡೆಸತಕ್ಕದ್ದು ಮತ್ತು ನಿರ್ದಿಷ್ಟವಾಗಿ ಒಮ್ಮೆ ಸಾಕ್ಷಿಗಳ ವಿಚಾರಣೆ ಪ್ರಾರಂಭವಾಯಿತೆಂದರೆ, ನ್ಯಾಯಾಲಯವು ದಾಖಲಿಸಬೇಕಾದ ಕಾರಣಗಳಿಗಾಗಿ ಅದನ್ನು

ಮುಂದಿನ ದಿನದ ಆಚೆಗೆ ಮುಂದೂಡುವುದನ್ನು ಅಗತ್ಯವೆಂದು ನಿರ್ಣಯಿಸಿದ ಹೊರತು, ಹಾಜರುಪಡಿಸಿದ ಎಲ್ಲಾ ಸಾಕ್ಷಿಗಳ ವಿಚಾರಣೆಯಾಗುವವರೆಗೆ ಪ್ರತಿದಿನವೂ ಅದನ್ನು ಮುಂದುವರೆಸತಕ್ಕದ್ದು ಮತ್ತು ತನಿಖೆ ಅಥವಾ ವಿಚಾರಣೆಯು ಒಂದು ವರ್ಷದ ಅವಧಿಯೊಳಗಾಗಿ ಮುಕ್ತಾಯಗೊಳ್ಳುವುದನ್ನು ಖಚಿತಪಡಿಸಿಕೊಳ್ಳುವ ಪ್ರಯತ್ನವನ್ನು ಮಾಡತಕ್ಕದ್ದು:

ಪರಂತು, ಸದರಿ ಅವಧಿಯೊಳಗಾಗಿ ವಿಚಾರಣೆಯು ಮುಕ್ತಾಯಗೊಳ್ಳದಿದ್ದರೆ, ಹಾಗೆ ಮಾಡಲಾಗದಿದ್ದಕ್ಕೆ ಕಾರಣಗಳನ್ನು ನ್ಯಾಯಾಧೀಶರು ದಾಖಲಿಸತಕ್ಕದ್ದು:

ಮತ್ತೂ ಪರಂತು, ಸದರಿ ಅವಧಿಯನ್ನು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಒಂದು ಬಾರಿಗೆ ಆರು ತಿಂಗಳುಗಳಿಗೆ ಮೀರದಿರುವ ಅಂಥ ಮುಂದುವರೆದಿರುವ ಅವಧಿಗೆ ವಿಸ್ತರಿಸಬಹುದು.

**3ಬಿ. ಕೆಲವು ಅಪರಾಧಗಳ ರಾಜಿ.–** 3ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿರುವುದಕ್ಕಾಗಿ ಒಬ್ಬ ವ್ಯಕ್ತಿಯನ್ನು ವಿಚಾರಣೆಗೆ ಒಳಪಡಿಸಿದಲ್ಲಿ, ಅಂಥ ಅಪರಾಧವನ್ನು ನ್ಯಾಯಾಲಯದ ಅನುಮತಿಯೊಂದಿಗೆ ಅಂಥ ಹಿಂಸಾಕೃತ್ಯವು ಯಾರ ಮೇಲಾಗಿದೆಯೋ ಆ ವ್ಯಕ್ತಿಯ ಮೂಲಕ ರಾಜಿ ಮಾಡಬಹುದು.

**3ಸಿ. ಕೆಲವು ಅಪರಾಧಗಳಿಗೆ ಸಂಬಂಧಿಸಿದ ಪೂರ್ವಭಾವನೆ.–** 3ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವುದಕ್ಕಾಗಿ ಒಬ್ಬ ವ್ಯಕ್ತಿಯನ್ನು ವಿಚಾರಣೆಗೆ ಒಳಪಡಿಸಿರುವಲ್ಲಿ, ನ್ಯಾಯಾಲಯವು ಅಂಥ ಅಪರಾಧವನ್ನು ಅದಕ್ಕೆ ವಿರುದ್ಧವಾದುದು ರುಜುವಾತಾದ ಹೊರತು, ಅಂಥ ವ್ಯಕ್ತಿಯು ಅಂಥ ಅಪರಾಧವನ್ನು ಎಸಗಿದ್ದಾನೆ ಎಂದು ಪೂರ್ವಭಾವನೆ ಮಾಡತಕ್ಕದ್ದು.

**3ಡಿ. ಅಪರಾಧಿಕ ಮನಸ್ಥಿತಿಯ ಬಗ್ಗೆ ಪೂರ್ವಭಾವನೆ.–** (1) ಆಪಾದಿತನ ಕಡೆಯಿಂದ ಅಪರಾಧಿಕ ಮನಸ್ಥಿತಿಯನ್ನು ಅಗತ್ಯಪಡಿಸುವ 3ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿನ ಒಂದು ಅಪರಾಧಕ್ಕಾಗಿನ ಯಾವುದೇ ಅಭಿಯೋಜನೆಯಲ್ಲಿ, ನ್ಯಾಯಾಲಯವು ಅಂಥ ಮನಸ್ಥಿತಿಯ ಇರುವಿಕೆಯನ್ನು ಪೂರ್ವಭಾವನೆ ಮಾಡತಕ್ಕದ್ದು, ಆದರೆ ಇದು ಆಪಾದಿತನಿಗೆ, ಅವನು ಆ ಅಭಿಯೋಜನೆಯಲ್ಲಿ ಒಂದು ಅಪರಾಧವೆಂದು ಆರೋಪಿಸಲಾದ ಕೃತ್ಯಕ್ಕೆ ಸಂಬಂಧಿಸಿದಂತೆ ಅಂಥ

ಮನಸ್ಥಿತಿಯನ್ನು ಆತ ಹೊಂದಿರಲಿಲ್ಲ ಎನ್ನುವ ಸಂಗತಿಯನ್ನು ರುಜುವಾತುಪಡಿಸಲು ಅಪರಾಧಿಗೆ ಒಂದು ಪ್ರತಿರಕ್ಷೆಯಾಗಿರತಕ್ಕದ್ದು.

(2) ಈ ಪ್ರಕರಣದ ಉದ್ದೇಶಗಳಿಗಾಗಿ, ನ್ಯಾಯಾಲಯ ಸಂದೇಹಾತೀತವಾಗಿ ಅಸ್ತಿತ್ವದಲ್ಲಿದೆ ಎಂದು ನಂಬಿದಾಗ ಮತ್ತು ಅದರ ಅಸ್ತಿತ್ವವು ಕೇವಲ ಸಂಭವನೀಯತೆಯ ಬಾಹುಳ್ಯತೆಯಿಂದ ಸ್ಥಾಪಿತವಾಗಿಲ್ಲ ಎಂದಾಗ ಮಾತ್ರ ಯಾವುದೇ ಸಂಗತಿಯನ್ನು ಅದು ರುಜುವಾತಾಗಿದೆ ಎಂದು ಹೇಳಲಾಗುತ್ತದೆ.

ವಿವರಣೆ.– ಈ ಪ್ರಕರಣದಲ್ಲಿ, "ಅಪರಾಧಿಕ ಮನಸ್ಥಿತಿ" ಪದಾವಳಿಯು ಒಂದು ಸಂಗತಿಯ ಉದ್ದೇಶ, ಪ್ರೇರಣೆ, ತಿಳುವಳಿಕೆ ಮತ್ತು ಒಂದು ಸಂಗತಿಯಲ್ಲಿ ನಂಬಿಕೆ ಅಥವಾ ನಂಬುವುದಕ್ಕೆ ಕಾರಣವನ್ನು ಒಳಗೊಳ್ಳುತ್ತದೆ.

**3ಇ. ಹಿಂಸಾಕೃತ್ಯಗಳಿಗೆ ಪರಿಹಾರ.–** (1) 3ನೇ ಪ್ರಕರಣದ (2)ನೇ ಉಪಪ್ರಕರಣದ ಅಥವಾ (3)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಅಪರಾಧಕ್ಕಾಗಿ ನೀಡಲಾದ ದಂಡನೆಯ ಜೊತೆಗೆ, ಯಾವುದೇ ಆರೋಗ್ಯ ಸೇವಾ ಸಿಬ್ಬಂದಿಗೆ ನೋವನ್ನುಂಟುಮಾಡುವ ಅಥವಾ ತೀವ್ರ ನೋವನ್ನುಂಟುಮಾಡಿರುವುದಕ್ಕಾಗಿ ಹಾಗೆ ಅಪರಾಧ ನಿರ್ಣೀತನಾದ ವ್ಯಕ್ತಿಯು ನ್ಯಾಯಾಲಯವು ನಿರ್ಧರಿಸಬಹುದಾದ ಅಂಥ ಮೊತ್ತವನ್ನು ಪರಿಹಾರ ರೂಪದಲ್ಲಿ ಪಾವತಿಸಲು ಹೊಣೆಗಾರನಾಗಿರತಕ್ಕದ್ದು.

(2) 3ಬಿ ಪ್ರಕರಣದ ಅಡಿಯಲ್ಲಿನ ಅಪರಾಧದ ರಾಜಿಯಲ್ಲಿ ಏನೇ ಇದ್ದರೂ, ಅದು ಯಾವುದೇ ಸ್ವತ್ತಿಗೆ ಹಾನಿ ಅಥವಾ ನಷ್ಟ ಉಂಟಾದ ಸಂದರ್ಭದಲ್ಲಿ, ಪಾವತಿಸಬೇಕಾದ ಪರಿಹಾರದ ಮೊತ್ತವು ನ್ಯಾಯಾಲಯವು ನಿರ್ಣಯಿಸಬಹುದಾದಂತೆ ಹಾನಿಗೊಳಗಾದ ಸ್ವತ್ತು ಅಥವಾ ನಷ್ಟಕ್ಕೊಳಗಾದ ಸ್ವತ್ತಿನ ನ್ಯಾಯಸಮ್ಮತ ಮಾರುಕಟ್ಟೆ ಮೌಲ್ಯದ ದುಪ್ಪಟ್ಟಾಗಿರತಕ್ಕದ್ದು.

(3) ಉಪಪ್ರಕರಣ (1) ಮತ್ತು (2)ರ ಮೇರೆಗೆ ಐತೀರ್ಪು ನೀಡಿದ ಪರಿಹಾರ ಮೊತ್ತವನ್ನು ಪಾವತಿಸಲು ವಿಫಲವಾದಾಗ, ಅಂಥ ಮೊತ್ತವನ್ನು ಕಂದಾಯ ವಸೂಲಾತಿ ಅಧಿನಿಯಮ, 1890 (1890ರ 1)ರ ಅಡಿಯಲ್ಲಿ ಭೂಕಂದಾಯದ ಬಾಕಿಯಾಗಿ ವಸೂಲು ಮಾಡತಕ್ಕದ್ದು.

**4. ಅಧಿನಿಯಮದ ಮೇರೆಗೆ ಕಾರ್ಯನಿರ್ವಹಿಸುವ ವ್ಯಕ್ತಿಗಳಿಗೆ ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಸದ್ಭಾವನೆಯಿಂದ ಮಾಡಲು ಉದ್ದೇಶಿಸಲಾದ ಯಾವುದೇ ಕೃತ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.